C.C– 69/2025

ಡಿ. ಡಬ್ಲೂ – 1

ಸಾಕ್ಷಿಯನ್ನು ದಿಃ 02.04.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಫಿರ್ಯಾದಿ ಪರ ವಕೀಲರಾದ ಶ್ರೀ.ಎಂ.ಎಸ್.ಜಿ ರವರಿಂದಃ**

**1.** ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು 3 ಬ್ಯಾಂಕುಗಳಲ್ಲಿ ಖಾತೆ ಹೊಂದಿ ವ್ಯವಹಾರ ಮಾಡುತ್ತಿದ್ದೇನೆ. ಅವುಗಳ ಪೈಕಿ ಸಾಗರದ ಕೆನರಾ ಬ್ಯಾಂಕಿನಲ್ಲಿ ಚೆಕ್ ಬುಕ್ ಅನ್ನು ಪಡೆದು ಹೆಚ್ಚಿನ ವ್ಯವಹಾರವನ್ನು ಆ ಬ್ಯಾಂಕಿನಲ್ಲಿ ಮಾಡುತ್ತಿದ್ದೇನೆ. ನಾನು ಅಧಿಕೃತ ಅಡಿಕೆ ವ್ಯಾಪಾರಿಯಾಗಿದ್ದು, ಪರವಾನಗಿ ಪಡೆದುಕೊಂಡು ಕಾಲಕಾಲಕ್ಕೆ ತೆರಿಗೆ ಸಹ ಪಾವತಿಸುತ್ತಿದ್ದೇನೆ. ನಾನು ಅಡಿಕೆಯನ್ನು ಎಪಿಎಂಸಿಯಿಂದ ಹಾಗೂ ರೈತರ ಮನೆ ಬಾಗಿಲಿನಿಂದಲೂ ಸಹ ಖರೀದಿ ಮಾಡುತ್ತಿದ್ದೇನೆ. ಎಪಿಎಂಸಿಯಲ್ಲಿ ಖರೀದಿ ಮಾಡಿದ ಅಡಿಕೆಗೆ ನಾನು ಚೆಕ್ ಮೂಲಕ ಹಣವನ್ನು ಪಾವತಿಸುತ್ತೇನೆ. ರೈತರ ಮನೆ ಬಾಗಿಲಿನಲ್ಲಿ ಅಡಿಕೆ ಖರೀದಿ ಮಾಡಿದಾಗ ನಾನು ಹಣವನ್ನು ಖಾತೆ ಮೂಲಕವೇ ವರ್ಗಾವಣೆ ಮಾಡುತ್ತೇನೆ ಅಥವಾ ಚೆಕ್ ಮೂಲಕ ಹಣವನ್ನು ನೀಡುತ್ತೇನೆ.

**2.** ಫಿರ್ಯಾದಿಯಿಂದ ನಾನು ಖರೀದಿ ಮಾಡಿದ ಜಮೀನು ಖರೀದಿ ಪೂರ್ವದಲ್ಲಿ ನನಗೆ ಫಿರ್ಯಾದಿ ಸುಮಂತನಿಗೆ ಸೇರಿದ ಜಮೀನು ಎಂದು ನನಗೆ ತಿಳಿದಿರಲಿಲ್ಲ. ಮುಂದುವರೆದು ಅವರ ತಂದೆ ಲಕ್ಷ್ಮಿ ನಾರಾಯಣರವರ ಜಮೀನು ಎಂದು ನಾನು ಖರೀದಿ ಮಾಡಿದ್ದೇನೆ. ನಾನು ಖರೀದಿ ಮಾಡಿದ ಸ್ವತ್ತಿನ ಮೇಲೆ ಯಾವುದೇ ಋಣಭಾರಗಳು, ಅಟ್ಯಾಚ್ ಮೆಂಟ್ ಹಾಗೂ ಹಕ್ಕುಗಳು ಇವೆಯೇ ಎಂಬುದನ್ನು ಖರೀದಿ ಪೂರ್ವದಲ್ಲಿ ನಾನು ವಕೀಲರ ಮೂಲಕ ಪರಿಶೀಲನೆ ಮಾಡಿಸಿದ್ದೇನೆ. ಸದರಿ ವಕೀಲರು ಸೊರಬದವರಾಗಿದ್ದು, ಅವರ ಹೆಸರು ಈಗ ನನಗೆ ನೆನಪಿಲ್ಲ. ಸದರಿ ವಕೀಲರೇ ಕ್ರಯಪತ್ರವನ್ನು ತಯಾರಿಸಿದರು. ಕ್ರಯ ಪತ್ರವನ್ನು ತಯಾರಿಸಿದವರು ವಕೀಲರಾಗಿರುವುದಿಲ್ಲ ಎಂದರೆ ಸರಿ. ನಾನು ದಾಖಲೆಗಳನ್ನು ಪರಿಶೀಲನೆ ಮಾಡಿಸಿದ ವಕೀಲರ ಹೆಸರು ನನಗೆ ಗೊತ್ತಿಲ್ಲ. ಸದರಿ ವಕೀಲರಿಗೆ ನಾನು ಖರೀದಿಸಿದ ಸ್ವತ್ತಿನ ಪಹಣಿ ಮತ್ತು ಖಾತೆ ದಾಖಲೆಗಳನ್ನು ತೆಗೆದುಕೊಂಡು ಹೋಗಿ ತೋರಿಸಿದ್ದೇನೆ. ಕ್ರಯ ಪತ್ರವನ್ನು ಬರೆಯಿಸಿಕೊಳ್ಳುವ ಸುಮಾರು 2 ತಿಂಗಳ ಹಿಂದೆ ನಾನು ದಾಖಲೆಗಳನ್ನು ಸೊರಬದ ವಕೀಲರ ಬಳಿ ಪರಿಶೀಲನೆ ಮಾಡಿಸಿದ್ದೇನೆ.

**3.** ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಕರಾರನ್ನು ಪಿಡಬ್ಲ್ಯೂ-1 ರವರು ತಯಾರು ಮಾಡಿಸಿದ್ದು, ಅದನ್ನು ಸ್ಟ್ಯಾಂಪ್ ಪೇಪರ್ ಮೇಲೆ ಬರೆಯಲಾಗಿದೆ. ಕರಾರು ಪತ್ರವನ್ನು ತಯಾರಿಸಲು ತಗುಲಿದ

ಖರ್ಚನ್ನು ನಾನೇ ಪಾವತಿಸಿದ್ದೇನೆ. ಸದರಿ ಕರಾರಿನಲ್ಲಿ ಸ್ವತ್ತಿನ ಪ್ರತಿಫಲವನ್ನು 4,50,000/- ಎಂದು ಕಾಣಿಸಲಾಗಿದೆ. ಫಿರ್ಯಾದಿಯ ತಂದೆ ಅಡಿಕೆ ಬೆಳೆಗಾರರು ಎಂದರೆ ಸರಿ. ಪಿ ಡಬ್ಲ್ಯೂ-1 ರವರ ಬಳಿ ನಾನು ಅಡಿಕೆಯನ್ನು ಖರೀದಿ ಮಾಡಿಲ್ಲ. ದಾಖಲೆಗಳನ್ನು ಪರಿಶೀಲನೆ ಮಾಡಿದ ನಮ್ಮ ವಕೀಲರು ಆಸ್ತಿ ಕ್ರಯ ಪತ್ರವನ್ನು ಯಾರು ಬರೆದುಕೊಡಬೇಕು ಎಂದು ನನಗೆ ಹೇಳಿಲ್ಲ. ಕರಾರನ್ನು ನನಗೆ ಲಕ್ಷ್ಮಿ ನಾರಾಯಣರವರು ಬರೆದುಕೊಟ್ಟರು. ಕ್ರಯ ಪತ್ರದ ನೊಂದಣಿ ಖರ್ಚನ್ನು ನಾನೇ ಪಾವತಿ ಮಾಡಿದ್ದೇನೆ. ಲಕ್ಷ್ಮಿ ನಾರಾಯಣರವರಿಗೆ ಪಾವತಿಸಿದ ಹಣವು ಕ್ರಯ ಪತ್ರ ಮಾಡುವಾಗ ಸದರಿ ಸ್ವತ್ತಿನ ಪ್ರತಿಫಲದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಬಗ್ಗೆ ನನ್ನ ಹಾಗೂ ಲಕ್ಷ್ಮಿ ನಾರಾಯಣರವರ ನಡುವೆ ಮಾತುಕತೆಯಾಗಿತ್ತು. ನಾನು ಬರೆಯಿಸಿಕೊಂಡಿರುವ ಕ್ರಯ ಪತ್ರಕ್ಕೆ ಲಕ್ಷ್ಮಿ ನಾರಾಯಣರವರು ಸಾಕ್ಷಿದಾರರು. ಕ್ರಯ ಪತ್ರದಲ್ಲಿ ಲಕ್ಷ್ಮಿ ನಾರಾಯಣರವರಿಗೆ ಈ ಹಿಂದೆ ಕೊಟ್ಟಿರುವ 2 ಲಕ್ಷ ರೂ. ಗಳನ್ನು ಹೊರತು ಪಡಿಸಿ 2.5 ಲಕ್ಷ ರೂ.ಗಳನ್ನು ಕೊಡುತ್ತಿದ್ದೇನೆ ಎಂದು ಬರೆಯಿಸಲು ನನಗೆ ತೊಂದರೆ ಇರಲಿಲ್ಲ. ಆದರೆ ಕ್ರಯ ಪತ್ರವನ್ನು ಲಕ್ಷ್ಮಿ ನಾರಾಯಣರವರೇ ಬರೆಯಿಸಿದ್ದರು. ಕ್ರಯಪತ್ರದಲ್ಲಿ ಮಾರಾಟ ಮತ್ತು ಖರೀದಿದಾರರ ವಿಳಾಸಗಳು ಸರಿಯಾಗಿ ಬರೆದಿದೆ. ಫಿರ್ಯಾದಿಗೆ ನಾನು ಖರೀದಿ ಮಾಡಿದ ಸ್ವತ್ತು ಹಿಸ್ಸೆ ಮೂಲಕ ಬಂದಿತ್ತು ಎಂದು ಸಹ ಕ್ರಯ ಪತ್ರದಲ್ಲಿ ಬರೆದಿದೆ. ಸದರಿ ಕ್ರಯಪತ್ರದಲ್ಲಿ ಆಸ್ತಿಯು ಎಲ್ಲಾ ಋಣಗಳಿಂದ ಮುಕ್ತವಾಗಿದೆ ಎಂದು ಸಹ ಬರೆದಿದೆ. ಸದರಿ ಕ್ರಯದ ಪ್ರತಿಫಲವು 4,50,000/- ರೂ. ಎಂದು ಸಹ ಕ್ರಯ ಪತ್ರದಲ್ಲಿ ಬರೆದಿದೆ. ಸದರಿ ಪ್ರತಿಫಲದ ಬಾಪ್ತು ಈ ಪ್ರಕರಣದ ನಿಪಿ-1 ರ ಚೆಕ್ ಅನ್ನು ಕೊಟ್ಟಿರುವುದಾಗಿ ಸಹ ಕ್ರಯ ಪತ್ರದಲ್ಲಿ ಬರೆದಿದೆ ಎಂದರೆ ಸರಿ.

**4.** ಕ್ರಯ ಪತ್ರ ನೊಂದಣಿಯಾದ ದಿನದಂದು ಲಕ್ಷ್ಮಿ ನಾರಾಯಣರವರನ್ನು ನಾನು 2 ಲಕ್ಷ ರೂ. ಹಣವನ್ನು ಯಾವಾಗ ಮರು ಪಾವತಿ ಮಾಡುತ್ತೀಯಾ ಎಂದು ಕೇಳಿದಾಗ, ಅವರು ಈ ಹಿಂದೆ ನನ್ನಿಂದ ಪಡೆದ 2 ಲಕ್ಷ ರೂ.ಗಳನ್ನು 2-3 ದಿನಗಳ ಒಳಗಾಗಿ ವಾಪಸ್ಸು ಕೊಡುತ್ತೇನೆ ಎಂದು ಹೇಳಿದ್ದರು. ಫಿರ್ಯಾದಿಯ ಪರವಾಗಿ ಅವರ ತಂದೆ ಕ್ರಯದ ಪ್ರತಿಫಲದ ಪೈಕಿ 2 ಲಕ್ಷ ರೂ.ಗಳನ್ನು ಮುಂಗಡವಾಗಿ ಪಡೆದುಕೊಂಡರೂ ಸಹ ಸದರಿ ಕ್ರಯದ ಬಾಪ್ತು ನಾನು ಇನ್ನೂ 2.5 ಲಕ್ಷ ರೂ.ಗಳನ್ನು ಫಿರ್ಯಾದಿಗೆ ಕೊಡಬೇಕು ಎಂದರೆ ಸರಿ. ದಿನಾಂಕ 22.10.2024 ರಂದು ನಿಪಿ-1 ರಲ್ಲಿ ಕಾಣಿದಷ್ಟು ಹಣವಾಗಲೀ ಅಥವಾ ಕನಿಷ್ಟ 2.5 ಲಕ್ಷ ರೂ. ಗಳಾಗಲೀ ನನ್ನ ಖಾತೆಯಲ್ಲಿ ಇರಲಿಲ್ಲ ಎಂದರೆ ಸರಿ. ಮುಂದುವರೆದು ಚೆಕ್ ಅನ್ನು ಕೊಡುವಾಗ ಖಾತೆಯಲ್ಲಿ ಹಣವಿಲ್ಲ. ಲಕ್ಷ್ಮಿ ನಾರಾಯಣರವರು ಪಡೆದಿರುವ 2 ಲಕ್ಷ ರೂ.ಗಳನ್ನು ನನಗೆ ಕೊಟ್ಟ 2-3 ದಿನಗಳ ನಂತರ ಚೆಕ್ ಅನ್ನು ನಗದೀಕರಣಕ್ಕೆ ಹಾಜರು ಪಡಿಸಿದರೆ ನಾನು ಅಗತ್ಯ ಹಣವನ್ನು ಖಾತೆಗೆ ಜಮಾ ಮಾಡುವೆ ಎಂದು ಹೇಳಿದ್ದೆ.

**5.** ನಿಪಿ–1 ರ ಚೆಕ್ ಮತ್ತು ಅದರಲ್ಲಿರುವ ಸಹಿ ನನ್ನದು. ಸದರಿ ಚೆಕ್ ಅನ್ನು ನಾನೇ ಬರೆಯಿಸಿಕೊಟ್ಟಿದ್ದೆ ಎಂದರೆ ಸರಿಯಲ್ಲ. ಮುಂದುವರೆದು ಫಿರ್ಯಾದಿಯು ಬರೆದಿದ್ದನು ಎನ್ನುತ್ತಾರೆ.  ನಿಪಿ–1 ರಲ್ಲಿರುವ ಬರೆದಿರುವ ಹೆಸರು, ಮೊತ್ತ, ತಾರೀಖು ಎಲ್ಲವೂ ಸರಿ ಇದೆ ಎಂಬುದನ್ನು ನಾನು ಖಚಿತಪಡಿಸಿಕೊಂಡ ನಂತರ ಸಹಿ ಮಾಡಿದ್ದೇನೆ. ದಿನಾಂಕ 18.10.2024 ರಿಂದ ಈ ದಿನಾಂಕದವರೆಗೆ (02.04.2026) ಲಕ್ಷ್ಮಿ ನಾರಾಯಣರವರು ನನ್ನಿಂದ ಪಡೆದ 2 ಲಕ್ಷ ರೂ.ಗಳನ್ನು ಮರು ಪಾವತಿ ಮಾಡಿಲ್ಲ ಎಂದು ಯಾವುದೇ ಕ್ರಮವನ್ನು ತೆಗದುಕೊಂಡಿಲ್ಲ. ನಾನು ಲಕ್ಷ್ಮಿ ನಾರಾಯಣರವರ ಊರಿನ ಅಳಿಯನಾಗಿರುವುದರಿಂದ ನನ್ನ ಮೇಲಿನ ವಿಶ್ವಾಸದ ಕಾರಣ ಲಕ್ಷ್ಮಿ ನಾರಾಯಣರವರು ನನಗೆ ಸರ್ವೆ ನಂಬರ್ 1/10 ರ ಜಮೀನನ್ನು ಮಾರಾಟ ಮಾಡಿದ್ದು, ನಾನು ಅದರ ಬಾಪ್ತು ಹಣವನ್ನು ಕಬಳಿಸುವ ಉದ್ದೇಶದಿಂದ ನನ್ನ ಖಾತೆಯಲ್ಲಿ ಹಣವಿಲ್ಲ ಎಂದು ತಿಳಿದಿದ್ದರೂ ಸಹ ನಾನು ನಿಪಿ–1 ರ ಚೆಕ್ ಅನ್ನು ನೀಡಿದ್ದೇನೆ ಎನ್ನುವುದು ಸರಿಯಲ್ಲ. ದಿನಾಂಕ 18.10.2024 ರ ಕ್ರಯ ಪತ್ರದಲ್ಲಿ ರತ್ನಮ್ಮ ಕೋಂ ಚಂದ್ರಪ್ಪ ಎಂದು ಸಹಿ ಮಾಡಿರುವ ಸಾಕ್ಷಿದಾರರು ನನ್ನ ತಾಯಿ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.